**<u>ದಿನಾಂಕಃ 23.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ  ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಬಿ.ಪಿ.,ಪ್ರತಿವಾದಿ ಪರ ವಕೀಲರಿಂದ</u>**

2. ನಾನು ಸಿದ್ದೇಶ್ವರನದುರ್ಗ ಗ್ರಾಮ ಪಂಚಾಯಿತಿಯಲ್ಲಿ 2000-05 ಇಸವಿಯಲ್ಲಿ ಸದಸ್ಯನಾಗಿದ್ದೆ ಎಂದರೆ ಸರಿ. ಈ ದಾವೆಯನ್ನು ವಾದಿ ಕಂಬಕ್ಕ ಪ್ರತಿವಾದಿ ಚಿತ್ತಪ್ಪನ ವಿರುದ್ಧ ದಾಖಲಿಸಿರುತ್ತಾಳೆ. ಈ ದಾವೆಯನ್ನು ದಾಖಲೆಯಲ್ಲಿ ವ್ಯತ್ಯಾಸ ಆಗಿರುವುದನ್ನು ಪ್ರಶ್ನಿಸಿ ಪರಿಹಾರ ಕೋರಲಾಗಿರುತ್ತದೆ ಅಂತ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 24 ಎಕರೆ 16 ಗುಂಟೆ ಜಮೀನು ಎಂದರೆ ಸರಿ. ಸದರಿ 24 ಎಕರೆ 16 ಗುಂಟೆ ಜಮೀನನ್ನು ವಾದಿ ಕಂಬಕ್ಕನ ಗಂಡ ಈರಮಲ್ಲಯ್ಯ ಖರೀದಿಸಿದಂತಹ ಆಸ್ತಿ ಎಂದರೆ ಸರಿ. ಈರಮಲ್ಲಯ್ಯ ಪೌತಿಯಾದ ನಂತರ ವಾದಿ ಕಂಬಕ್ಕನ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ.

3. ಈರಮಲ್ಲಯ್ಯ ತನ್ನ ಜೀವಿತಾವಧಿಯಲ್ಲಿ ಒಟ್ಟು 24 ಎಕರೆ 16 ಗುಂಟೆ ಜಮೀನಿನ ಪೈಕಿ 5 ಎಕರೆ ಜಮೀನನ್ನು ದಿನಾಂಕ.11.06.1963 ರಂದು 300/- ರೂಪಾಯಿಗಳಿಗೆ ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು 4 ಎಕರೆ ಮಾರಾಟ ಮಾಡಿರುತ್ತಾನೆ ಎಂದು ನುಡಿಯುತ್ತಾರೆ.



4. ಒಟ್ಟು 24 ಎಕರೆ 16 ಗುಂಟೆ ಜಮೀನಿನ ಪೈಕಿ "ಅ" ಮತ್ತು "ಬ" ಖರಾಬು ಎಷ್ಟು ಇರುತ್ತದೆ ಅಂತ ಪಹಣಿ ಪತ್ರಿಕೆಯಲ್ಲಿ ನೋಡಿರುವುದಿಲ್ಲ. ಸಾಮಾನ್ಯವಾಗಿ ಜಮೀನನ್ನು ಮಾರಾಟ ಮಾಡುವಾಗ ಚೆಕ್ಕುಬಂಧಿ, ವಿಸ್ತೀರ್ಣ ಮತ್ತು ಖರಾಬು ಜಮೀನನ್ನು ನೋಡಿ ಖರೀದಿಸಲಾಗುತ್ತದೆ ಎಂದರೆ ಸಾಕ್ಷಿಯು ಕೇವಲ 4 ಎಕರೆ ಮಾರಾಟ ಮಾಡಲಾಗಿದ್ದು, ಖರಾಬು ಜಮೀನು ಮಾರಾಟ ಮಾಡಿಲ್ಲ ಅದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನಿಗೆ ಮಾರಾಟ ಮಾಡಿದ ಜಮೀನಿನ ಪೂರ್ವ ದಿಕ್ಕಿಗೆ ಸರ್ವೆ ನಂಬರ್ 81 ಮತ್ತು 142 ರ ಜಮೀನುಗಳು ಬರುತ್ತವೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ಹೇಳಿದರೆ ಗೊತ್ತಾಗುವುದಿಲ್ಲ, ಆದರೆ ಅವುಗಳ ಮಾಲೀಕರ ಹೆಸರುಗಳನ್ನು ಹೇಳಬಹುದು ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಸರ್ವೆ ನಂಬರ್ 134 ರ ಉಳಿದ ಜಮೀನು ಬರುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಭೀಮಾಚಾರಿ ತಂದೆ ಮಲ್ಲಯ್ಯ ಖರೀದಿಸಿರುವ 134 ರ ಭಾಗದ ಜಮೀನು

ಬರುತ್ತದೆ ಎಂದರೆ ಸರಿ. ಸಣ್ಣ ಮಲ್ಲಪ್ಪ ಖರೀದಿಸಿದ ಜಮೀನಿನ ದಕ್ಷಿಣ ದಿಕ್ಕಿಗೆ ಚಳ್ಳಕೆರೆ-ಪಾವಗಡ ರಸ್ತೆ ಬರುತ್ತದೆ ಎಂದರೆ ಸರಿ. ಮೇಲಿನ ಚೆಕ್ಕುಬಂಧಿಯಲ್ಲಿ ಬರುವ ಜಮೀನನ್ನು ಅಳತೆ ಮಾಡಿಸಿದರೆ 5 ಎಕರೆ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಅದು ಹೇಗೆ 5 ಎಕರೆ ಬರುತ್ತದೆ ಮಾರಾಟ ಮಾಡಿರುವುದು ಕೇವಲ 4 ಎಕರೆ ಎಂದು ನುಡಿಯುತ್ತಾರೆ.

5. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನಿಗೆ ಮಾರಾಟ ಮಾಡಿದ ದಿನಾಂಕ.11.06.1963 ರ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಯನ್ನು ಪ್ರತಿವಾದಿಯವರ ತಾಯಿ ಮಲ್ಲಕ್ಕನಿಗೆ ಮಾರಾಟ ಮಾಡಿದ ಕ್ರಯ ಪತ್ರದಲ್ಲಿಯೂ ಸಹ ಅದೇ ಚೆಕ್ಕುಬಂಧಿಯನ್ನು ತೋರಿಸಲಾಗಿರುತ್ತದೆ ಎಂದರೆ ಸರಿ. ದಿನಾಂಕ.11.06.1963 ರ ಕ್ರಯ ಪತ್ರದ ಪ್ರಕಾರ ಎಂ.ಪಿ.ಆರ್.212/1968-69 ರಂತೆ 5 ಎಕರೆ ಜಮೀನಿಗೆ ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಎಂ.ಪಿ.ಆರ್.212/1968-69 ರ ಮುಟೇಷನ್ ಆದೇಶವನ್ನು ಕಂಬಕ್ಕ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪನಿಂದ ಒಟ್ಟು 5 ಎಕರೆ ಜಮೀನನ್ನು ದಿನಾಂಕ.19.02.1970 ರಂದು ಮಲ್ಲಕ್ಕ ಖರೀದಿಸಿರುತ್ತಾಳೆ ಎಂದರೆ ಸರಿಯಲ್ಲ. ಮಲ್ಲಕ್ಕ ತೀರಿಕೊಂಡ ನಂತರ ಅವರ ಮಕ್ಕಳುಗಳಾದ ಪ್ರತಿವಾದಿಯರ ಹೆಸರಿಗೆ 5 ಎಕರೆ ಜಮೀನು ಖಾತೆ ಆಗಿರುತ್ತದೆ ಎಂದರೆ ಸರಿ. 5 ಎಕರೆ ಜಮೀನು ಖಾತೆ ಆಗಿರುವುದನ್ನು ಪ್ರಶ್ನಿಸಿ ಉಪವಿಭಾಗಧಿಕಾರಿಗಳ ನ್ಯಾಯಾಲಯ ಚಿತ್ರದುರ್ಗ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಳು



ಎಂದರೆ ಸರಿ. ಸದರಿ ಅರ್ಜಿಯು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಂಪೂರ್ಣ 5 ಎಕರೆ ಜಮೀನಿನಲ್ಲಿ 25 ಹುಣಸೆ ಮರ ಬೆಳೆಸಿ ಅದರಲ್ಲಿ ಪ್ರತಿವಾದಿಯವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 5 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಅಂತ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಕೇವಲ 4 ಎಕರೆ ಜಮೀನನ್ನು ಮಾರಾಟ ಮಾಡಿರುವ ವಿಚಾರವನ್ನು ನಾನು ವಾದಿ ಕಂಬಕ್ಕನಿಂದ ತಿಳಿದುಕೊಂಡಿರುತ್ತೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮಾಚಾರಿ ಕೂಡ 4 ಎಕರೆ ಜಮೀನನ್ನು ಮಾರಾಟ ಮಾಡಲಾಗಿರುತ್ತದೆ. ಸಣ್ಣಮಲ್ಲಪ್ಪ ಮತ್ತು ಭೀಮಾಚಾರಿಗೆ ಮಾರಾಟ ಮಾಡಿರುವ ಕ್ರಯ ಪತ್ರಗಳನ್ನು ನಾನು ತಕರಾರು ಆದಾಗ ಖುದ್ದು ಜಮೀನಿನಲ್ಲಿ ನಿಂತು ನೋಡಿರುತ್ತೇನೆ. ನಾನು ವ್ಯಾಜ್ಯ ಜಮೀನನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ವಾದಿಯರಿಗೆ ಸೇರಿದ ಹುಣಸೆ ಮರಗಳು ಇರುತ್ತವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಮತ್ತು ವಾದಿಯರ ಜಮೀನಿಗೂ ಸುಮಾರು 1 ವರೆ ಕಿ.ಮೀ ಅಂತರ ಇರುತ್ತದೆ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.